ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ

195 (382) ಶ್ರೀ ಅಮರೇಶ್ (ಮುಳಬಾಗಿಲು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಶಾಲಾ ಮಕ್ಕಳಿಗೆ ಯಾವ ತರಗತಿಯಿಂದ ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ.

(ಆ) ಇದಕ್ಕಾಗಿ ಸರ್ಕಾರ ಪ್ರತಿ ವರ್ಷ ಬಿಡುಗಡೆ ಮಾಡುವ ಮೊತ್ತವೆಷ್ಟು; ಯಾವ ಏಜೆನ್ಸಿಯಿಂದ ಸಮವಸ್ತ್ರಗಳನ್ನು ಖರೀದಿಸಲಾಗಿದೆ; (ಗುತ್ತಿಗೆದಾರರ ಸಂಪೂರ್ಣ ವಿವರ ನೀಡುವುದು)

(ಇ) ಪ್ರಸಕ್ತ ಸಾಲಿನಲ್ಲಿ ವಿತರಿಸಲಾಗಿರುವ ಸಮವಸ್ತ್ರಗಳು ಕಳಪೆ ಗುಣಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

(ಉ) ಸದರಿ ಸಾಲಿನಲ್ಲಿ ಪುಸ್ತಕಗಳನ್ನು ಆಯಾ ಶಾಲೆಗಳಿಗೆ ಸಮರ್ಪಕವಾಗಿ ತಲುಪದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿ ವರ್ಷ ಒಂದು ಜೊತೆ ಸಮವಸ್ತ್ರ ವಿತರಿಸಲಾಗುತ್ತಿದೆ.

(ಆ) ಪ್ರಸಕ್ತ ಸಾಲಿಗೆ ಅಂದರೆ 2012–13ನೇ ಸಾಲಿಗೆ ಸಮವಸ್ತ್ರ ವಿತರಣಾ ಸಂಸ್ಥೆಗಳಿಗೆ ಹಣ ಪಾವತಿಗೆ ಸಂಬಂಧಿಸಿದಂತೆ ಸರ್ಕಾರವು ರೂ. 80.00 ಕೋಟಿ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡಿದೆ.

ಸರಬರಾಜು ಸಂಸ್ಥೆಗಳು:–

1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
2. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು
3. ಮೆ. ಮಫತ್‌ಲಾಲ್ ಇಂಡಸ್ಟ್ರೀಸ್ ಲಿ., ಮುಂಬಯಿ .

(ಇ) ಇಲ್ಲ

(ಈ) ಉದ್ಭವಿಸುವುದಿಲ್ಲ.

(ಉ) ಬಂದಿದೆ.

ಕೆಲವು ಶಾಲೆಗಳಿಗೆ ಪ್ರಥಮ ಭಾಷೆ ಆಂಗ್ಲ ಸಂಸ್ಕೃತಿ ತೃತೀಯ ಭಾಷೆ ಕನ್ನಡ ಮತ್ತು ಉರ್ದು ಶೀರ್ಷಿಕೆಗಳ ಪಠ್ಯಪುಸ್ತಕಗಳು ಮಾತ್ರ ವಿತರಣೆ ಆಗಿರಲಿಲ್ಲ ಸರ್ಕಾರಿ ಮುದ್ರಣಾಲಯಕ್ಕೆ ನೀಡಿದ್ದ ಶೀರ್ಷಿಕೆಗಳ ಮುದ್ರಣ ವಿಳಂಬವಾದ ಕಾರಣ ಈ ರೀತಿ ಆಗಿರುತ್ತದೆ. ಈ ಎಲ್ಲ ಶಾಲೆಗಳಿಗೂ ವಿತರಣೆ ಮಾಡಲಾಗಿರುತ್ತದೆ.

ಪ್ರಾಥಮಿಕ ಶಾಲೆಗಳ ಸಂಖ್ಯಾಬಲ

302 (370) ಶ್ರೀ ಶ್ರೀನಿವಾಸ್ ಎಂ (ಮಂಡ್ಯ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮಂಡ್ಯ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಗುರುತಿಸಲಾಗಿದೆಯೇ

(ಆ) ಗುರುತಿಸಿದ್ದಲ್ಲಿ ಅಂತಹ ಶಾಲೆಗಳಾವುವು (ಮಾಹಿತಿ ನೀಡುವುದು)

(ಇ) ಕಡಿಮೆ ಸಂಖ್ಯೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಇತರೆ ಯಾವ ಶಾಲೆಗಳಿಗೆ ವಿಲೀನಗೊಳಿಸಲು ತಿರ್ಮಾನಿಸಲಾಗಿದೆ (ವಿವರ ನೀಡುವುದು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಹೌದು

ಆ) 1. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಯಣ್ಣನಕೊಪ್ಪಲು, ಮಂಡ್ಯ ತಾಲ್ಲೂಕು (ದಾಖಲಾತಿ ಸಂಖ್ಯೆ ಶೂನ್ಯ)

2. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಡವೀರನಹಳ್ಳಿ, ಮಂಡ್ಯ ತಾಲ್ಲೂಕು (ದಾಖಲಾತಿ ಸಂಖ್ಯೆ 5)

3. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗುನ್ನಾಯಕನಹಳ್ಳಿ, (ದಾಖಲಾತಿ ಸಂಖ್ಯೆ 6)

ಇ) 1. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಯಣ್ಣನಕೊಪ್ಪಲು, ಇಲ್ಲಿನ ದಾಖಲೆ ಹಾಗೂ ಇತರೆ ವಸ್ತುಗಳನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಲಿಯೂರು ಶಾಲೆಗೆ ವಿಲೀನಗೊಳಿಸಲಾಗುವುದು.

2. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಡವೀರನಹಳ್ಳಿ ಶಾಲೆಯನ್ನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತರಣಿಗೆರೆ ಶಾಲೆಗೆ ವಿಲೀನಗೊಳಿಸಲಾಗುವುದು.